

**ಎಡದಿಂದ ಬಲಕ್ಕೆ:**

1. ದೂರು ಕೊಟ್ಟೊಡನೆ ಆತ ಧೈರ್ಯರಹಿತನಾದ (3)
3. ವಿಶ್ವವನ್ನಾಳಲು ಹೋದರೆ ಎಲ್ಲ ಹಾಳು (3)
4. ವಿದ್ಯೆ ಕಲಿಸಲು ಇದು ಒಳ್ಳೆಯ ಸಮಯ (3)
6. ನೇರಿಳೆಯನ್ನು ಕೊಳ್ಳಲು ಹೋಗಿ ತಾವರೆ ತಂದನೇ? (3)
7. ಕೌಶಲ್ಯವನ್ನೆಲ್ಲ ಪಡೆದಿದ್ದರೂ ಮರಣ ಕಂಡ (4)
9. ಭರಮಣ್ಣ ಹೊತ್ತಿರುವುದು 'ಹತ್ತು ಕಿಲೋ ತೂಕ' (4)
11. ನ್ಯಾಯವಂತನ ಅಂಗಡಿಯಲ್ಲಿ ಎಂಥ ಬೆಣ್ಣೆ? (4)
13. ಕೇಡನ್ನು ಮಾಡಿದ್ದು ಅವನ ಕೆಟ್ಟ ಮಾತು (4)
15. ಗ್ರಾಮ ಸಭೆಯಲ್ಲಿ ಭಾರೀ ಯುದ್ಧವೇ ನಡೆಯಿತು (3)
17. ವಜ್ರಗಳನ್ನು ತರುವುದು ಇಲ್ಲಿ ನಿಷೇಧಿತ (3)
18. ಬಹಳ ಸುಲಭದಲ್ಲಿ ಸುತ್ತಿ ಬಂದದ್ದು ಹಿಂದು ಮುಂದು (3)
19. ಕೆಸರಿನಲ್ಲಿ ಬಿದ್ದುಹೋಯಿತು ಎಲ್ಲ ಸಾಮಗ್ರಿ (3)

**ಮೇಲಿಂದ ಕೆಳಕ್ಕೆ:**

1. ಕ್ಷೇಮವನ್ನು ಪಾಲಿಸಲು ಊಟ ಅತ್ಯವಶ್ಯ ತಾನೇ? (3)
2. ಸುರನೋ, ಅಸುರನೋ, ನಾಲಿಗೆ ಒಂದೇ ಅಲ್ಲವೇ? (3)
3. ವಿಫಲವಾಗಿ, ವಿಫಲವಾಗಿ ಕಡೆಗೆ ಭಾರೀ ಕ್ಷೋಭೆ (3)
5. ಉಣ್ಣಲು ಏನೇ ಇರಲಿ, ಉಪ್ಪು ಇರಲೇಬೇಕಲ್ಲ? (3)
7. ಕಾರ್ಖಾನೆಯಲ್ಲೇ ಗುಮಾಸ್ತ. ಅದೇ ಅವನ ಕೆಲಸ (4)
8. ಯುಕ್ತಿ ಹಿಂದು ಮುಂದಾಗಿದ್ದರೂ ಬಲದಿಂದಲೇ ಕೂಡಿದ್ದು (4)
9. ಮಾರೀಚನಂತೆ ಕಂಡಿತ್ತೇ? ಅದು 'ಬಿಸಿಲು ಗುದುರೆ' (4)
10. ರಣಕ್ಕೆ ಹೊರಡಿ ಎಂದೊಡನೆ ಹಿಂದೆಗೆದ ಪುಕ್ಕಲ (4)
12. ಮರವನ್ನೇರುವಾಗ ಒಂದೂ ಧ್ವನಿ ಇಲ್ಲ, ನಿಶ್ಶಬ್ದ (3)
14. ಬಂಡಿಯೇರುವ ಕಾಲದಲ್ಲಿ ನಿಸ್ಸಾರ ಬುಡಮೇಲು (3)
15. ಎಲ್ಲವನ್ನೂ ಸರಿದೂಗಿಸಿದ್ದು ಭಾರೀ ಖುಷಿ (3)
16. ಕುಸುಮದ ರೂಪ ಅದೇಕೋ ಮಬ್ಬು ಮಬ್ಬು (3)

### ಪದಬಂಧ 6-9-2012 ರ ಉತ್ತರಗಳು

**ಎಡದಿಂದ ಬಲಕ್ಕೆ:**

1. ಅನುಕಂಪ; 3. ಶರಧಿ; 4. ತಿರುಕ; 6. ಕಳಂಕಿತ; 7. ಪಾಳೇಗಾರ; 8. ಅನುಬಂಧ; 10. ತಡಸಲು; 12. ಮನುಕುಲ; 14. ಅನುಭವಿ; 16. ವಿರೋಧ; 17. ವಿಶಿಷ್ಟ; 18. ಮಹಾವ್ಯಾಧ.

**ಮೇಲಿಂದ ಕೆಳಕ್ಕೆ:**

1. ಅಧಿಕ; 2. ಪತಿತ; 3. ಶಸ್ತ್ರಾಗರ; 5. ಕಮಾನು; 7. ಪಾರಂಗತ; 9. ಧನಬಲ; 11. 'ಸರವಿ' (ವಿರಸ ತಲೆಕೆಳಗು); 13. ಅನುದ್ದಿಷ್ಟ; 14. ಅಧಮ; 15. ವಿವಿಧ.

# ಪ್ರಶ್ನಾಂಕಣ

## ಪಚ್ಚೆ -ಏನು ವಿಶೇಷ?

ಪ್ರಾಚೀನ ಕಾಲದಿಂದಲೂ ಅತ್ಯಂತ ಜನಪ್ರಿಯವಾಗಿರುವ, ಅತ್ಯಮೂಲ್ಯ ಎನಿಸಿರುವ ಚತುರ್ವಿಧ ಪರಮ ಶ್ರೇಷ್ಠ ರತ್ನಗಳಲ್ಲಿ ಪಚ್ಚೆಯೂ ಒಂದು ( ಈ ಗುಂಪಿನ ಇತರ ಮೂರು ರತ್ನಗಳು ವಜ್ರ, ಕೆಂಪು ಮತ್ತು ನೀಲ). ವಜ್ರ ಇಂಗಾಲದಿಂದಾಗಿರುವಂತೆ, ಕೆಂಪು ಮತ್ತು ನೀಲ 'ಕೋರಂಡಂ' ಖನಿಜದಿಂದಾಗಿರುವಂತೆ ಪಚ್ಚೆ 'ಬೆರೈಲ್' ಖನಿಜದ ಹರಳು. ರಾಸಾಯನಿಕವಾಗಿ 'ಬೆರಿಲಿಯಂ ಅಲ್ಯೂಮಿನಿಯಂ ಸಿಲಿಕೇಟ್' ಆಗಿರುವ ಬೆರೈಲ್‌ನ ಹಸಿರು ಬಣ್ಣದ ಹರಳೇ ಪಚ್ಚೆ.

ಜ್ವಾಲಾಮುಖಿ ಮೂಲ ಪೆಗ್ಮಟೈಟ್ ಶಿಲೆಗಳಲ್ಲಿ ಮೈದಾಳುವ ಬೆರೈಲ್ ಹರಳುಗಳದು ಷಡ್ಭುಜ ಪಟ್ಟಕದ ರೂಪ. ಬೆರೈಲ್ ಖನಿಜ ಹರಳುಗಟ್ಟುತ್ತಿರುವಾಗ ಆಕಸ್ಮಿಕವಾಗಿ ಅದರಲ್ಲಿ ಕ್ರೋಮಿಯಂ ಲೋಹಾಂಶ ಬೆರೆತರೆ ಅಂಥ ಬೆರೈಲ್ ಹರಳುಗಳು ಹಸಿರು ಬಣ್ಣ ಪಡೆದು ಪಚ್ಚೆ ಆಗುತ್ತವೆ. ಬೆರೈಲ್‌ನಲ್ಲಿ ಬೆರೆವ ಕ್ರೋಮಿಯಂನ ಪ್ರಮಾಣವನ್ನಾಧರಿಸಿ ಪಚ್ಚೆಯ ಹಸಿರು ಛಾಯೆ ಭಿನ್ನ ಭಿನ್ನವಾಗುತ್ತದೆ: 'ತಿಳಿ ಹಸಿರು, ಗಾಢ ಹಸಿರು, ಉಜ್ವಲ ಹಸಿರು, ಎಲೆ ಹಸಿರು... ಇತ್ಯಾದಿ.' ಇಂಥ ಹರಳುಗಳನ್ನು (ಚಿತ್ರ ನೋಡಿ) ಶಿಲೆಗಳಿಂದ ಬೇರ್ಪಡಿಸಿ ಸೂಕ್ತವಾಗಿ ಕತ್ತರಿಸಿ ಸಾಣೆ ಹಿಡಿದಾಗ ಮನಮೋಹಕ ಪಚ್ಚೆ ಸಿದ್ಧವಾಗುತ್ತದೆ; ಆಭರಣಗಳಲ್ಲಿ ಕಂಗೊಳಿಸುತ್ತದೆ.



ಪರಿಶುದ್ಧ ಪಚ್ಚೆ ಹರಳುಗಳು ಎಷ್ಟು ಅಪರೂಪ, ಎಷ್ಟು ಅಮೂಲ್ಯ, ಎಷ್ಟು ಜನಪ್ರಿಯ ಎಂದರೆ ಎರಡು ಕ್ಯಾರೆಟ್‌ಗಳಿಗಿಂತ ಅಧಿಕ ತೂಕದ (1 ಕ್ಯಾರೆಟ್ =200 ಮಿಲಿಗ್ರಾಂ) ಪಚ್ಚೆ ಹರಳುಗಳ ಬೆಲೆ ವಜ್ರದ ಬೆಲೆಗಿಂತ ಅಧಿಕ. ಖನಿಜಗಳ ಗಡಸುತನ ಸೂಚಿಸುವ 'ಮೋಹ್‌ನ ಪಟ್ಟಿ'ಯ ಪ್ರಕಾರ ಪಚ್ಚೆಯ ಗಟ್ಟಿತನ ಸೂಚ್ಯಂಕ 7.5 ರಿಂದ 8. ಪಚ್ಚೆಯ ಸಾಂದ್ರತೆ ಪ್ರತಿ ಘನ ಸೆಂಟಿಮೀಟರ್‌ಗೆ 2.9 ಗ್ರಾಂ.

ದಟ್ಟ ಹಸಿರಿನ ಅತಿ ಸುಂದರ ಅತ್ಯುತ್ಕೃಷ್ಟ ಪಚ್ಚೆ ಹರಳುಗಳ ನಿಕ್ಷೇಪಗಳು ದಕ್ಷಿಣ ಅಮೆರಿಕದ 'ಕೊಲಂಬಿಯಾ' ದೇಶದಲ್ಲಿವೆ. ತಿಳಿವರ್ಣದ ಪಚ್ಚೆ ಹರಳುಗಳಿಗೆ ಬ್ರೆಜಿಲ್ ಪ್ರಸಿದ್ಧ. ಗಾಢ ವರ್ಣದ ಆದರೆ ಬಹಳ ಸಣ್ಣ ಪಚ್ಚೆಗಳು ದಕ್ಷಿಣ ಆಫ್ರಿಕಾದ ಟ್ರಾನ್ಸ್‌ವಾಲ್‌ನಲ್ಲಿ ಹೇರಳ.

ವಿಸ್ಮಯ ಏನೆಂದರೆ ಪಚ್ಚೆಯ ಭಾರೀ ಹರಳುಗಳು ಅಪರೂಪವಲ್ಲ. ಈವರೆಗೆ ಲಭಿಸಿರುವ ಅತ್ಯಂತ ದೊಡ್ಡ ಪಚ್ಚೆಯ ತೂಕ 7025 ಕ್ಯಾರೆಟ್. ಎಂದರೆ 1405 ಗ್ರಾಂ ಅದು ದೊರಕಿದ್ದು ಕೊಲಂಬಿಯಾದಲ್ಲಿ; ಇಸವಿ 1961.

■ ಎನ್. ವಾಸುದೇವ್